ಸಿ. ಸಿ. ನಂ. **1598/2018**

ಪಿ ಡಬ್ಲ್ಯೂಃ **1**

**ಸಾಕ್ಷಿಯು ದಿನಾಂಕಃ 24-01-2024 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಆರೋಪಿ ಪರ ಶ್ರೀ ಇ ವಿ ಎ ಜಿ., ವಕೀಲರಿಂದ**

ನನಗೆ ಗಂಗಾಧರ ಗೌಡ ಪರಿಚಯ. ಆರೋಪಿ ಗಂಗಾಧರ ಗೌಡ ಜೊತೆಗೆ ವ್ಯವಹಾರ ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಆರೋಪಿ ಮೇಲೆ ಇನ್ನೂ 2 ಚೆಕ್ ಬೌನ್ಸ ಕೇಸ್ ಬಾಕಿ ಇವೆ ಅಂದರೆ ನನಗೆ ಗೊತ್ತಿಲ್ಲ. ಅವುಗಳನ್ನು ನಾನೇ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. 2 ಪ್ರಕರಣಗಳಲ್ಲಿ ಒಂದು ಹಣ ಪಡೆದು ರಾಜಿಯಾಗಿದೆ. ಇನ್ನೊಂದು ಚಾಲ್ತಿಯಲ್ಲಿದೆ ಅಂದರೆ ಸರಿಯಲ್ಲ. ಈ ಎಲ್ಲಾ ವಿಷಯ ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಸುಮಾ ಇವರು ಗಂಗಾಧರ ಗೌಡನ ಮಗಳು. ಸುಮಾ ಇವರು ಆರೋಪಿಯ ಮೇಲೆ ಇ ಪಿ ಪ್ರಕರಣ ಸಲ್ಲಿಸಿದ ವಿಷಯ ನನಗೆ ಗೊತ್ತಿಲ್ಲ. ಅದರಲ್ಲಿ ಸುಮಾ ಅವರು ಹಣ ಪಡೆದು ರಾಜಿಯಾಗಿದ್ದಾರೆ ಅಂದರೆ ನನಗೆ ಗೊತ್ತಿಲ್ಲ.

ಗಂಗಾಧರ ಗೌಡನ ಮಗ ಜಗದೀಶ ನನಗೆ ಗೊತ್ತಿಲ್ಲ. ಅವರ ಕಡೆಯಿಂದ ಸಹ ನಾನು ಆರೋಪಿಯ ಮೇಲೆ ಕೇಸ್ ಸಲ್ಲಿಸಿದ್ದೇನೆ ಅಂದರೆ ನನಗೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ಆರೋಪಿ ತಿಂಗಳು ತಿಂಗಳು ಹಣ ಪಾವತಿಸುತ್ತಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಆರೋಪಿ ಭದ್ರತೆಗಾಗಿ ನೀಡಿದ ಚೆಕ್ ನ್ನು ಹಣ ಪಾವತಿಸಿದರೂ ಸಹ ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

ಸಿ. ಸಿ. ನಂ. **1598/2018**

ಪಿ ಡಬ್ಲ್ಯೂ: **1**

ಗಂಗಾಗಧರ ಗೌಡನ ಮಕ್ಕಳು ಸುಮಾ ಮತ್ತು ಜಗದೀಶ ಪರಿಚಯ ಇದ್ದರೂ ಸಹ ನನಗೆ ಗೊತ್ತಿಲ್ಲ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.